ಈ) ಪ್ರತಿ ವರ್ಷ 7.68 ಲಕ್ಷ ಜನ ಆಗಿನ ಜನಸಂಖ್ಯೆಗೆ ಹೆಚ್ಚುವರಿ ಸೇರ್ಪಡೆಯಾಗುತ್ತಾರೆ. 1987 ರಿಂದ 31-1-1992ರವರೆವಿಗೆ ಜನಸಂಖ್ಯೆಯ ಹೆಚ್ಚಳ 38,40,790 ಇರುತ್ತದೆ. (ಜಿಲ್ಲಾವಾರು ವಿವರ ಕೊಡಲಾಗಿದೆ)

ಕ್ರಮ ಸಂಖ್ಯೆ	ಜಿಲ್ಲೆ	ಜನಸಂಖ್ಯೆ
1.	ಬೆಂಗಳೂರು ನಗರ	6,64,190
2.	ಬೆಂಗಳೂರು (ಗ್ರಾಮಾಂತರ)	1,04,710
3.	ಬೆಳಗಾವಿ	2,70,745
4.	ಬಳ್ಳಾರಿ	2,01,745
5.	ಬೀದರ್	1,27,685
6.	ಬಿಜಾಪುರ	2,56,440
7.	ಚಿಕ್ಕಮಗಳೂರು	52,535
8.	ಚಿತ್ರದುರ್ಗ	2,00,065
9.	ದಕ್ಷಿಣ ಕನ್ನಡ	1,57,680
10.	ಧಾರವಾಡ	2,76,665
11.	ಗುಲ್ಬರ್ಗ	2,46,630
12.	ಹಾಸನ	1,04,700
13.	ಕೊಡಗು	11,670
14.	ಕೋಲಾರ	1,52,905
15.	ಮಂಡ್ಯ	1,12,706
16.	ಮೈಸೂರು	2,80,050
17.	ರಾಯಚೂರು	2,61,615
18.	ಶಿವಮೊಗ್ಗ	1,21,850
19.	ತುಮಕೂರು	1,61,795
20.	ಉತ್ತರ ಕನ್ನಡ	72,405
	ಒಟ್ಟು	38,40,790

ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗ ಒದಗಿಸುವ ಮತ್ತು ಬಾಕಿ ಇರುವ ಹೆಸರುಗಳ ಬಗ್ಗೆ

292 (483) ಪ್ರಸಂತ ವಿ. ಸಾಲಿಯಾನ್ (ಕಾಪು):- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) 1990-91, 1991-92ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉದ್ಯೋಗ ವಿನಿಮಯ ಕಛೇರಿಯ ಮೂಲಕ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ಒದಗಿಸಲಾಗಿದೆ? (ಇಲಾಖಾವಾರು ವಿವರವನ್ನು ಒದಗಿಸುವುದು)

ಆ) ಇನ್ನೂ ಎಷ್ಟು ಅಭ್ಯರ್ಥಿಗಳು ತಮ್ಮ ಹೆಸರನ್ನು ಉದ್ಯೋಗದ ಸಲುವಾಗಿ ನೋಂದಾಯಿಸುತ್ತಾರೆ.?

ಶ್ರೀ ಎಂ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಉದ್ಯೋಗ ವಿನಿಮಯ ಕಚೇರಿಯ ಮೂಲಕ 1990-91 ನೇ ಸಾಲಿನಲ್ಲಿ ಮತ್ತು 1991-92 ನೇ ಸಾಲಿನಲ್ಲಿ ಕ್ರಮವಾಗಿ 415 ಮತ್ತು 710 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿ ಕೊಡಲಾಗಿದೆ. ಉದ್ಯೋಗ ಪಡೆದ ಅಭ್ಯರ್ಥಿಗಳ ಇಲಾಖಾವಾರು ಮಾಹಿತಿ ಲಭ್ಯವಿರುವುದಿಲ್ಲ.

ಅ) 1991ನೇ ಡಿಸೆಂಬರ್ ಅಂತ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಉದ್ಯೋಗ ವಿನಿಮಯ ಕಛೇರಿಗಳ ದಾಖಲೆಯಲ್ಲಿ 25,195 ಮಹಿಳೆಯರೂ ಸೇರಿದಂತೆ 74,010 ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಉದ್ಯೋಗಾಕಾಂಕ್ಷಿಗಳಾಗಿದ್ದರು.

ಆಸ್ಪತ್ರೆಯ ಆವರಣದಲ್ಲಿ ರೋಗಿಗಳ ಉಪಯೋಗಕ್ಕಾಗಿ ಗ್ಲೂಕೋಸ್ ಪ್ಲಾಂಟ್ ಸ್ಥಾಪನೆ

294 (599) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

1) ಹಾಸನದ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ರೋಗಿಗಳ ಉಪಯೋಗಕ್ಕಾಗಿ ಒಂದು ಗ್ಲೂಕೋಸ್ ಪ್ಲಾಂಟನ್ನು ಸ್ಥಾಪಿಸಲು ಹಾಸನ ಜಿಲ್ಲಾ ಪರಿಷತ್‌ನವರು ಈ ಪ್ಲಾಂಟಿನ ಕಟ್ಟಡಕ್ಕೆ ಹಣ ಕೊಡುವುದಾಗಿ ನಿರ್ಣಯ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ನಿಜವಲ್ಲವೇ ?

2) ಸರ್ಕಾರವು 1991-92ನೇ ಸಾಲಿನಲ್ಲಿ ಗ್ಲೂಕೋಸ್ ಪ್ಲಾಂಟನ್ನು ಸ್ಥಾಪಿಸಲು ಮಂಜೂರಾತಿ ಕೊಡುವುದೇ?

3) ಇದಕ್ಕೆ ತಗಲುವ ಅಂದಾಜು ಮೊಬಲಗೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

1) ಹೌದು.

2) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

3) ಸುಮಾರು 105.00 ಲಕ್ಷ ರೂ. ಗಳು.

ಹಾಸನ ಪಟ್ಟಣದಲ್ಲಿ ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್

295 (600) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಹಾಸನ ಪಟ್ಟಣದಲ್ಲಿ ಇಂಡಸ್ಟ್ರಿಯಲ್ ಗ್ರೋತ್ ಸೆಂಟರನ್ನು ಸ್ಥಾಪಿಸಲು ಸರ್ಕಾರ ಯಾವ ವರ್ಷದಲ್ಲಿ ಮಂಜೂರಾತಿ ಕೊಟ್ಟಿದೆ?

ಆ) ಈ ಸಂಬಂಧದಲ್ಲಿ ಎಷ್ಟು ಎಕರೆ ಜಮೀನನ್ನು ಯಾವ ಯಾವ ಗ್ರಾಮಗಳಲ್ಲಿ ಸರ್ಕಾರ ಸ್ವಾಧೀನ ಪಡಿಸಿಕೊಳ್ಳಲಿದೆ?

ಇ) ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್‌ನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿದರೆ ಸರ್ಕಾರ ಯಾವ ಯಾವ ರಿಯಾಯಿತಿಗಳನ್ನು ಕೈಗಾರಿಕೆ ಸ್ಥಾಪಿಸಿದವರಿಗೆ ನೀಡಲಾಗುತ್ತದೆ? (ವಿವರ ನೀಡುವುದು).

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-

ಅ) ಕೇಂದ್ರ ಸರ್ಕಾರವು ದಿನಾಂಕ 20-10-1989ರ ಪತ್ರದಲ್ಲಿ ರಾಜ್ಯದಲ್ಲಿ ಹಾಸನ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿ 3 ಗ್ರೋತ್ ಸೆಂಟರ್‌ಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಿತು. ಇದಕ್ಕೆ ತತ್ಸಂಬಂಧವಾದ ಯೋಜನಾ ವರದಿಗಳನ್ನು ರಾಜ್ಯ ಸರ್ಕಾರವು ದಿನಾಂಕ 27-2-1991 ರಲ್ಲಿ ಸಲ್ಲಿಸಿದ್ದು, ಕೇಂದ್ರ ಸರ್ಕಾರವು ದಿನಾಂಕ 27-1-1992 ರಲ್ಲಿ ಇದಕ್ಕೆ ಮಂಜೂರಾತಿ ನೀಡಿದೆ.

ಆ) ಈ ಸಂಬಂಧದಲ್ಲಿ ಈ ಕೆಳಗೆ ತಿಳಿಸಿದ ಗ್ರಾಮಗಳಲ್ಲಿ ಭೂ ಸ್ವಾಧೀನಪಡಿಸಿಕೊಳ್ಳಲು ಕ್ರಮವನ್ನು ಕೈಗೊಳ್ಳಲಾಗಿದೆ.